



ಹರಿಲಾಲನಿಗೆ ಕೊಟ್ಟ. ಹಣ ನೋಡಿ ಮೊದಲ ಬಾರಿಗೆ ಹರಿಲಾಲನ ಕಣ್ಣುಗಳು ಹೊಳೆದವು. ಇದಕ್ಕೂ ಮೊದಲು ಸಹ ಈ ವ್ಯಾಪಾರಿ ಮತ್ತು ಬೇರೆ ವ್ಯಾಪಾರಿಗಳು ಲೇವಾದೇವಿಗೆ ಸಂಬಂಧಿಸಿದ ಹಣವನ್ನು ಹರಿಲಾಲನ ಮೂಲಕವೇ ಕೊಟ್ಟಿದ್ದರು. ಹೀಗಾಗಿ ಈ ಬಾರಿಯೂ ಯಾವುದೂ ಅಸಹಜವಾಗಿರಲಿಲ್ಲ.

ಇಂದು ಮೊದಲ ಬಾರಿಗೆ ಇಷ್ಟು ದೊಡ್ಡ ಮೊತ್ತದ ಹಣವನ್ನು ಕೈಯಲ್ಲಿ ತೆಗೆದುಕೊಂಡಾಗ ಹರಿಲಾಲನ ಮನಸ್ಸು ಉಯ್ಯಾಲೆಯಾಟವನ್ನು ಆಡಲಾರಂಭಿಸಿತು. ಹರಿಲಾಲನಿಗೆ ಹಣವನ್ನು ಒಪ್ಪಿಸಿದ ನಂತರ ಆ ವ್ಯಾಪಾರಿ ಮದ್ರಾಸಿಗೆ ಮರಳಿ ಹೋಗಿದ್ದ, ಹರಿಲಾಲ ಹಣ ಕೊಟ್ಟಿದ್ದಕ್ಕೆ ಅಧಿಕೃತ ರಸೀದಿಯನ್ನೂ ಬರೆದು ಕೊಟ್ಟಿದ್ದ, ಹೀಗಾಗಿ ಆ ವ್ಯಾಪಾರಿ ನಿಶ್ಚಿಂತೆಯಿಂದ ಮರಳಿ ಹೋಗಿದ್ದ. ಆದರೆ ಹರಿಲಾಲನ ಮನಸ್ಸು ಹೊಯ್ದಾಡುತ್ತಿತ್ತು.

ಯಾವ ದಲ್ಲಾಳಿ ಹರಿಲಾಲನಿಗೆ ಕೈತುಂಬಾ ಲಾಭದ ಆಸೆಯನ್ನು ತೋರಿಸಿದ್ದನೋ, ಅವನು ಸ್ಪಷ್ಟವಾಗಿ, 'ಇನ್ನು ಒಂದೆರಡು ವಾರಗಳಷ್ಟೆ, ನೀವು ಹಣಕ್ಕೆ ವ್ಯವಸ್ಥೆಯನ್ನು ಮಾಡಿದರೆ, ತುಂಬಾ ಕಡಿಮೆ ಅವಧಿಯಲ್ಲಿ ನಿಮ್ಮ ಬಂಡವಾಳ ಮರಳಿ ಬರುವುದು' ಎಂದಿದ್ದ. ಲೆಕ್ಕಪತ್ರದ ಪುಸ್ತಕ ನನ್ನ ಬಳಿಯೇ ಇರುತ್ತದೆ, ಅಲ್ಲದೆ ತಾನು ಆ ಹಣವನ್ನು ಶಾಶ್ವತವಾಗಿ ನನ್ನ ಬಳಿ ಇಟ್ಟುಕೊಳ್ಳುವುದಿಲ್ಲ, ಒಂದು ವೇಳೆ ಈ ವ್ಯಾಪಾರ ಕುದುರಿದರೆ, ಎಲ್ಲರ ಸಾಲವನ್ನೂ ಸಹ ತೀರಿಸುವೆ. ಹದಿನೈದು ದಿನದೊಳಗೆ ಮೂಲ ಹಣವನ್ನು ಯಾರಿಗೂ ಗೊತ್ತಾಗದಂತೆ ಮರಳಿ ಖಾತೆಗೆ ಬರೆಯುತ್ತೇನೆ ಎಂದೂ ಹರಿಲಾಲ ಯೋಚಿಸಿದ.

ತುಪ್ಪದ ಮಡಿಕೆಯಲ್ಲಿ ತುಪ್ಪವೇ ಇರುವುದು ಎಂಬ ವ್ಯಾವಹಾರಿಕತೆಯಲ್ಲಿ ಹರಿಲಾಲ ಈ ವ್ಯಾಪಾರದಲ್ಲಿ ತನ್ನ ಅದೃಷ್ಟದ ಪರೀಕ್ಷೆಯನ್ನು ಮಾಡಲು ತೀರ್ಮಾನಿಸಿದ. ಅವನಿಗೆ ಒಂದೇ ಒಂದು ಭಯ ಕಾಡುತ್ತಿತ್ತು, ಒಂದು ವೇಳೆ ಈ ನಡುವೆ ಈ ಬಗ್ಗೆ ಯಾರಿಗಾದರು ಲೇಶಮಾತ್ರ ಸುಳಿವು ಸಿಕ್ಕರೂ, ಸೇಠ್ ನರೋತ್ತಮದಾಸರು ತನ್ನನ್ನೆಂದೂ ಕ್ಷಮಿಸುವುದಿಲ್ಲವೆಂಬ ಖಾತರಿ ಅವನಿಗಿತ್ತು.

'ಹರಿಲಾಲ, ನೀವೇನೂ ಯೋಚಿಸಬೇಡಿ' ದಲ್ಲಾಳಿ ಹರಿಲಾಲನ ಭಯವನ್ನು ದೂರ ಮಾಡಿದ, 'ಲೆಕ್ಕದ ಪುಸ್ತಕವನ್ನು ದಿನಾ ಯಾರೂ ಗಮನಿಸುವುದಿಲ್ಲ. ಲೆಕ್ಕವನ್ನು ಸ್ವಲ್ಪ ಹಿಂದು ಮುಂದು ಮಾಡಿದರೆ ನರೋತ್ತಮದಾಸರಿಗೂ ತೊಂದರೆಯಾಗುವುದಿಲ್ಲ, ಕಚೇರಿಯ ಕೆಲಸ ಕಾರ್ಯಗಳಿಗೂ ತೊಂದರೆಯಾಗುವುದಿಲ್ಲ. ನಿಮ್ಮ ಕಷ್ಟಗಳು ಸಹ ಬಗೆಹರಿಯುತ್ತವೆ.'

ಕಷ್ಟಗಳು ಬಗೆಹರಿಯುತ್ತವೆ ಎಂಬ ಮಾತು ಹರಿಲಾಲನನ್ನು ಮತ್ತೊಮ್ಮೆ ಸದಾ ಕಾಲಕ್ಕೂ ಮುಳುಗಿಸಿತು. ಹರಿಲಾಲನಿಗೆ ಸಾಲಗಾರರ ಹಣವನ್ನು ಒಪ್ಪಿಸಿದ ನಂತರ ಮದ್ರಾಸಿನ ಆ ವ್ಯಾಪಾರಿ ವ್ಯಾಪಾರದ ಬಗ್ಗೆ ಮಾತುಕತೆಗೆ ನೇರವಾಗಿ ಮುಂಬೈಗೆ ಬಂದು ನರೋತ್ತಮದಾಸರನ್ನು ಭೇಟಿಯಾದ. ಅವನು ನರೋತ್ತಮದಾಸರಿಗೆ, ನಿಮ್ಮ ಹಣವನ್ನು ಹರಿಲಾಲನಿಗೆ ಕೊಟ್ಟಿದ್ದೇನೆ ಎಂದ. ಈ ಮಾತನ್ನು ನಂಬದಿರಲು ಕಾರಣವೇ ಇರಲಿಲ್ಲ. ಇಂಥ ಲೇವಾದೇವಿ ವ್ಯವಹಾರ ಈ ಮೊದಲು ಸಹ ನಡೆಯುತ್ತಿತ್ತು. ಹರಿಲಾಲನಿಗೆ ಕೊಟ್ಟ ಹಣ ಲೆಕ್ಕಕ್ಕೆ ಹೋಗಿಲ್ಲ ಎಂದು ಯಾರೂ ಅನುಮಾನ ಮಾಡುವಂತಿರಲಿಲ್ಲ. ಆದರೆ ನರೋತ್ತಮದಾಸರಿಗೆ, ಹರಿಲಾಲನ ಹಣ ಲೇವಾದೇವಿ ವ್ಯವಹಾರದ ಹೊರಗೆ ನಡೆಯುತ್ತಿದೆ ಎಂಬ ಗಾಳಿ ಸುದ್ದಿ ಸಿಕ್ಕಿತ್ತು. ಆದರೆ ಲೆಕ್ಕಪತ್ರದ ವಿಷಯದಲ್ಲಿ ಹರಿಲಾಲನ ಬಗ್ಗೆ ಸಂಶಯಪಡುವ ಮಾತೇ ಇರಲಿಲ್ಲ. ಅಂದು ರಾತ್ರಿಯೇ ಸೇಠ್ ನರೋತ್ತಮದಾಸರು ಕಲ್ಕತ್ತಾದ ತಮ್ಮ ಕಚೇರಿಗೆ, ಹೊಸ ಮಾಲನ್ನು ಮದ್ರಾಸಿಗೆ ಕಳುಹಿಸಿ ಎಂದು ಪತ್ರ ಬರೆದರು. ಅಲ್ಲದೆ ಆ ಮೂವತ್ತು ಸಾವಿರ ರೂಪಾಯಿಗಳಿಗೆ ಸಂಬಂಧಿಸಿದಂತೆ ವಿವರವನ್ನು ತಿಳಿಸುವಂತೆಯೂ ಆದೇಶವನ್ನೂ ಬರೆದರು.

ಆ ಪತ್ರ ಕಚೇರಿಗೆ ಬಂದಾಗ, ಲೆಕ್ಕದ ಪುಸ್ತಕದಲ್ಲಿ ಮೂವತ್ತು ಸಾವಿರ ರೂಪಾಯಿಗಳು ಜಮಾ ಆಗಿಲ್ಲವೆಂಬುದು ಬಹಿರಂಗವಾಯಿತು. ಕಚೇರಿಯ ಮ್ಯಾನೇಜರ್, ಹರಿಲಾಲನನ್ನು ಕರೆಸಿ ರಸೀದಿಯ ಬುಕ್ ತರಿಸಿದ. ತಕ್ಷಣ, ಹರಿಲಾಲ ಆ ಹಣವನ್ನು ಜಮಾ ಮಾಡಿಸಿಲ್ಲ ಎಂಬ ವಿಷಯ ಬೆಳಕಿಗೆ ಬಂತು.

ಹರಿಲಾಲನಿಗೆ ಪ್ರಜ್ಞೆಯೇ ತಪ್ಪಿದಂತಾಯಿತು. ಈಗ ಯಾವ ಮಾರ್ಗವೂ ಇರಲಿಲ್ಲ. ಅವನು ಮಾಡಿದ ಕೆಲಸಕ್ಕೆ, ಅವನನ್ನು ಯಾರೂ ಸಹ ಬಚಾವು ಮಾಡಲು ಸಾಧ್ಯವಿರಲಿಲ್ಲ. ಅವನು ದಲ್ಲಾಳಿಯ ಬಳಿಗೆ ಹೋಗಿ ಕೈ ಮುಗಿದ, ಆದರೆ ಅವನು ಸ್ಪಷ್ಟವಾಗಿ ಸಹಾಯವನ್ನು ಮಾಡಲು ನಿರಾಕರಿಸಿದ.

'ಹರಿಲಾಲ, ನೀನು ಹಣವನ್ನು ಯಾವ ರೀತಿಯಲ್ಲಿ ತಂದೆ ಎಂಬುದಕ್ಕೂ, ನನಗೂ ಸಂಬಂಧವಿಲ್ಲ. ನೀನು ವ್ಯಾಪಾರವನ್ನು ಮಾಡಿದ್ದೀಯ. ನಿನಗೆ ಲಾಭ ಬೇಕೆಂದಿದ್ದರೆ ಅಪಾಯವನ್ನು ಎದುರಿಸಲೇ ಬೇಕು' ಎಂದ ದಲ್ಲಾಳಿ.

ಹರಿಲಾಲ ಕೆಟ್ಟ ರೀತಿಯಲ್ಲಿ ಸಿಲುಕಿದ್ದ. ಅಪರಾಧವನ್ನು ಒಪ್ಪಿಕೊಳ್ಳದೆ ಬೇರೆ ಮಾರ್ಗವಿರಲಿಲ್ಲ. ಹರಿಲಾಲ ಆ ಹಣವನ್ನು ಲೆಕ್ಕದ ಪುಸ್ತಕದಲ್ಲಿ ಗೋಲ್‌ಮಾಲ್ ಮಾಡಿಕೊಟ್ಟಿದ್ದಾನೆ ಎಂಬ ವಿಷಯವನ್ನು ತಿಳಿದ ದಲ್ಲಾಳಿ, ಈಗ ಅವನ ವಿರುದ್ಧ ತಿರುಗಿ ಬಿದ್ದ. ಇನ್ನು ಹರಿಲಾಲ ಈ ವಿಷಯದಿಂದ ಹೊರ ಬರಲಾರ ಎಂಬುದನ್ನು ತಿಳಿದ ನಂತರ ದಲ್ಲಾಳಿ ಪೂರಾ ಹಣವನ್ನು ಕೊಡುವಂತೆ ಹರಿಲಾಲನಿಗೆ ಗಂಟು ಬಿದ್ದ.

***

ಸೇಠ್ ನರೋತ್ತಮದಾಸರಿಗೆ ಹರಿಲಾಲ ಮಾಡಿದ ಗೋಲ್‌ಮಾಲ್ ಸುದ್ದಿ ತಿಳಿದಾಗ ಅವರು ತುಂಬಾ ವ್ಯಗ್ರರಾದರು. ಬೇರೆ ಮನುಷ್ಯನಾಗಿದ್ದರೆ ಅವರು ತಕ್ಷಣ ಪೊಲೀಸರಿಗೆ ತಿಳಿಸಿ ಅವನನ್ನು ಕಾನೂನಿನ ವಶಕ್ಕೆ ಒಪ್ಪಿಸುತ್ತಿದ್ದರು. ಆದರೆ ಹರಿಲಾಲ ಬಾಪೂ ಅವರ ಜ್ಯೇಷ್ಠ ಪುತ್ರನಾಗಿದ್ದ. ಬಾಪೂ ಅವರ ಮಗನ ಮೇಲೆ ಗೋಲ್‌ಮಾಲ್ ಆರೋಪವನ್ನು ಹೊರಿಸಿದರೆ, ಅವನ ಮೇಲೆ ಕಾನೂನು ಕ್ರಮ ಕೈಗೊಳ್ಳಲಾಗುವುದು, ಆಗ ಈ ಘಟನೆಗೆ ಸಂಬಂಧಿಸಿದಂತೆ ದೇಶವ್ಯಾಪಿ ಭಯಾನಕ ಪ್ರತಿಕ್ರಿಯೆ ವ್ಯಕ್ತವಾಗುವುದು ಎಂಬುದು ನರೋತ್ತಮದಾಸರಿಗೆ ತಿಳಿದಿತ್ತು. ಆದರೂ ತಾವು ಯಾವ ಕ್ರಮವನ್ನು ಕೈಗೊಳ್ಳದಿರುವುದು, ಹಾಗೂ ಬಾಪೂ ಅವರಿಗೆ ಈ ವಿಷಯವನ್ನು ತಿಳಿಸದಿರುವುದು ಉಚಿತವಲ್ಲ ಎಂದು ನರೋತ್ತಮದಾಸರು ಭಾವಿಸಿದ್ದರು. ಈ ಸಂಪೂರ್ಣ ಘಟನೆಯ ಬಗ್ಗೆ, ನ್ಯಾಯಕ್ಕಾಗಿ ಯಾವ ರೀತಿಯಲ್ಲಿ ಹೆಜ್ಜೆಗಳನ್ನಿಡಬೇಕು ಎಂಬ ಬಗ್ಗೆ ಬಾಪೂ ಅವರ ಸಲಹೆಯನ್ನು ಪಡೆಯುವುದು ಉಚಿತವೆಂದು ನರೋತ್ತಮದಾಸರು ತಿಳಿದರು.

ತಾವು ಯಾವ ಪರಿಸ್ಥಿತಿಯಲ್ಲಿ ಹರಿಲಾಲನನ್ನು ಕಲ್ಕತ್ತಾಕ್ಕೆ ಕಳುಹಿಸಿದ್ದೆವು, ತಮಗೆ ಹರಿಲಾಲನ ಬಗ್ಗೆ ಎಷ್ಟೊಂದು ಭರವಸೆಯಿತ್ತು, ಹರಿಲಾಲ ಕಳೆದ ಅದೆಷ್ಟೋ ದಿನಗಳಿಂದ ಹೊರಗಿನ ಲೇವಾದೇವಿಯಲ್ಲಿ ಸಿಲುಕಿದ್ದ ಎಂಬ ಎಲ್ಲಾ ವಿಷಯವನ್ನು ಸಹ ಬಾಪೂ ಅವರಿಗೆ ಪತ್ರದ ಮೂಲಕ ತಿಳಿಸಿ, ಆ ಮುವತ್ತು ಸಾವಿರ ರೂಪಾಯಿಗಳ ಗೋಲ್‌ಮಾಲ್ ಬಗ್ಗೆಯೂ ದೂರಿದ್ದರು. ಘಟನೆಯ ಸತ್ಯಾಸತ್ಯತೆಯನ್ನು ಮನದಟ್ಟು ಮಾಡಲು ಅವರು ಹರಿಲಾಲನ ಹಸ್ತಾಕ್ಷರವಿದ್ದ ರಸೀದಿಯ ನಕಲನ್ನೂ ಸಹ ಬಾಪೂ ಅವರಿಗೆ ಕಳುಹಿಸಿದ್ದರು.

ಇದು ಬಾಪೂ ಅವರಿಗೆ ತೀವ್ರ ಆಘಾತವನ್ನುಂಟು ಮಾಡುವ ಘಟನೆಯಾಗಿತ್ತು. ಇದುವರೆಗಿನ ವೃತ್ತಾಂತಗಳಲ್ಲಿ ವೈಯಕ್ತಿಕ ಲೇವಾದೇವಿಯ ವಿಷಯಗಳು ಮಾತ್ರ ಇರುತ್ತಿದ್ದವು. ಗೋಲ್‌ಮಾಲ್‌ನ ಈ ಪ್ರಸಂಗ ಹರಿಲಾಲನನ್ನು ಜೈಲಿಗೆ ತಳ್ಳುವಂತಿತ್ತು. ನರೋತ್ತಮದಾಸರ ಪತ್ರವನ್ನು ಬಾಪೂ ಅವರಿಗೆ ತಲುಪಿಸಲು ಬಂದ ಮನು ಸೂಬೇದಾರರಿಗೆ ಬಾಪೂ ಅವರು ತುಂಬಾ ದುಃಖದಿಂದ ಹೇಳಿದರು.

'ನೋಡಿ, ಹರಿಲಾಲ ನನ್ನ ಮಗ ಎಂಬುದನ್ನು ಲೇವಾದೇವಿಯ ಮಧ್ಯೆ ತರಬಾರದು. ಒಂದು ವೇಳೆ ಅವನು ಅಪರಾಧವನ್ನು ಮಾಡಿದ್ದಾನೆಂದು ಅನ್ನಿಸಿದರೆ, ಕಾನೂನಿನಂತೆ ಅವನಿಗೆ ಶಿಕ್ಷೆ ಸಿಗಲೇ ಬೇಕು'.

'ಬಾಪೂ' ಮನು ಸೂಬೇದಾರರು ಮೆಲ್ಲನೆ ತರ್ಕಿಸಿದರು, 'ನೀವು ಹೇಳಿದರೆ, ನನ್ನ ಕಡೆಯಿಂದ ನರೋತ್ತಮದಾಸರಿಗೆ ಜಾಮೀನು ಕೊಟ್ಟು ಹರಿಲಾಲನನ್ನು ಈ ಪ್ರಸಂಗದಿಂದ ಬಿಡಿಸಿಕೊಳ್ಳುತ್ತೇನೆ... ಈ ವಿಷಯವನ್ನು ಮುಂದುವರೆಸಬಾರದು...'

'ಸುಬೇದಾರ್, ಇದೇನು ಹೇಳುತ್ತಿದ್ದೀರ?' ಬಾಪೂ ವ್ಯಥಿತರಾದರು, 'ಒಂದು ವೇಳೆ ನಾನು ಸಂತೋಷದಲ್ಲಿರುವುದನ್ನು ನೀವು ನೋಡಲು ಬಯಸುವುದಾದರೆ, ಈಗ ಹರಿಲಾಲನಿಗೆ ಕೋರ್ಟ್‌ನಿಂದಲೇ ನ್ಯಾಯವನ್ನು ಕೊಡಿಸಿ.'

ನರೋತ್ತಮದಾಸರಿಗೆ ಬಾಪೂ ಅವರ ಸಲಹೆ ತಿಳಿದಾಗ ಅವರ ಚಿಂತೆ ದುಪ್ಪಟ್ಟಾಯಿತು. ಅವರಿಗೆ ಬಾಪೂ ಅವರ ವ್ಯಥೆ ತಿಳಿದಿತ್ತು. ಈಗ ಅವರು ಹರಿಲಾಲನನ್ನು ಹೆಚ್ಚು ನಂಬಲು ಸಾಧ್ಯವಿರಲಿಲ್ಲ. ಈ ಘಟನೆಯನ್ನು ಮತ್ತೂ ಮುಂದುವರೆಸಿ,